SC No.131/2022
CW-04 / PW-05

**ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು**

**ಸತ್ರ ಮೊಕದ್ದಮೆ ಸಂಖ್ಯೆ 131/2022**

ಚಾ.ಸಾಃ 04 ಫ್ರಾ.ಸಾಃ 05

ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ 05.02.2026

| | | |
|---|---|---|
| ಸಾಕ್ಷಿಯ ಹೆಸರು | : | ನಾಗಪ್ಪ |
| ತಂದೆಯ ಹೆಸರು | : | ಈರಪ್ಪ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಿಳಾಸ | : | ಆಕಳಕುಂಪಿ |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ಚಾಸಾ.5 - ಬಸವರಾಜ ಗೊತ್ತು. ಈಗ ನಾಲ್ಕುವರೆ ವರ್ಷಗಳ ಹಿಂದೆ ಪೋಲಿಸರು ನನ್ನ ಮತ್ತು ಚಾಸಾ-5 ರವರ ಸಮಕ್ಷಮ ಕಜ್ಜಿಬಂಡಿ ಹಳ್ಳದಲ್ಲಿ ಆರೋಪಿ ತೋರಿಸಿ ಹಾಜರು ಪಡಿಸಿದ ಚಾಕುವನ್ನು ವಶಪಡಿಸಿಕೊಂಡಿದ್ದಾರೆ. ಪೋಲಿಸರು ಮಹಜರ ಮಾಡಿದ್ದಾರೆ. ನಾನು ಸಹಿ ಮಾಡಿದ್ದೇನೆ. ಸಾಕ್ಷಿಯು ಗುರುತಿಸಿದ ಮಹಜರನ್ನು **ನಿಪಿ.3** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.3(ಎ)** ಎಂದು ಗುರುತಿಸಲಾಯಿತು.

02. ಆರೋಪಿ ಸದರಿ ಚಾಕುವನ್ನು ಜಾಲಿ ಗಿಡದಿಂದ ತಂದು ಹಾಜರು ಪಡಿಸಿದನು.

03. ಸಾಕ್ಷಿಯು ಗುರುತಿಸಿದ ಚಾಕುವನ್ನು ಈಗಾಗಲೇ ಮು.ಮಾ.3 ಎಂದು ಗುರುತಿಸಲಾಗಿದೆ. ಸಾಕ್ಷಿಯು ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಆರೋಪಿ ಪರ ಶ್ರೀ ಎಸ್.ವಾಯ್ ವಕೀಲರಿಂದ ಪಾಟೀ ಸವಾಲುಃ-**

04. ನನಗೆ ಓದಲು ಬರೆಯಲು ಬರುತ್ತದೆ. ಚಾಸಾ.1 – ಶಿವಮ್ಮ ನನಗೆ ದೂರದ ಸಂಬಂಧಿಕಳು. ನಮ್ಮ ಅಡ್ಡಹೆಸರು ಮುದಗೂಟ. ಚಾಸಾ.6 – ಅಯ್ಯಣ್ಣ ರವರ ಅಡ್ಡಹೆಸರು ಮುದಗೂಟ. ಚಾಸಾ.6 ರವರ ತಾತ ಮತ್ತು ನನ್ನ ತಾತ ಖಾಸ ಅಣ್ಣ-ತಮ್ಮಂದಿರು ಎನ್ನುವುದು ಸರಿಯಲ್ಲ, ಆದರೆ ಅವರು ಸಂಬಂಧಿಕರು.

05. ಪೋಲಿಸರು ನನಗೆ ನೋಟಿಸ್ ಕೊಟ್ಟಿಲ್ಲ. ಆ ದಿವಸ ಯಾರೂ ನನ್ನನ್ನು ಪೋಲಿಸ್ ಠಾಣೆಗೆ ಕರೆದುಕೊಂಡು ಹೋಗಿಲ್ಲ.

06. ಮೂರು ಜನ ಪೋಲಿಸರು ಮತ್ತು ಒಬ್ಬ ಪಿ.ಎಸ್.ಐ ಸ್ಥಳಕ್ಕೆ ಬಂದಿದ್ದರು. ನಮ್ಮ ಊರಿಗೆ ಪೋಲಿಸರು ಬಂದಾಗ ಮದ್ಯಾಹ್ಣ 01.30 ರ ಸಮಯವಾಗಿತ್ತು. ಪೋಲಿಸರು ನಮ್ಮ ಊರಿನಲ್ಲಿ ಐದು ನಿಮಿಷ ಇದ್ದರು. ಪೋಲಿಸರು ನಮ್ಮ ಊರಿಗೆ ಬಂದಾಗ ನಾನು ಚಹ ಹೊಟೇಲ್ ನಲ್ಲಿ ಇದ್ದೆನು. ಪೋಲಿಸರು ನಮ್ಮ ಊರಿಗೆ ಬಂದಾಗ ನನಗೆ ನೋಟಿಸ್ ಕೊಟ್ಟಿಲ್ಲ.

07. ಈ ದಿನ ನನ್ನ ಜೊತೆ ಚಾಸಾ.9 – ರಂಗನಾಥ ತಂದೆ ಭೀಮರಾಯ ದಳಪತಿ ನ್ಯಾಯಾಲಯಕ್ಕೆ ಬಂದಿದ್ದಾರೆ. ಚಾಸಾ-9 ಇವರು ಚಾಸಾ-6 ರವರ ತಂಗಿಯ ಗಂಡ.

08. ನಮ್ಮ ಊರಿನಿಂದ ಕಜ್ಜಿಬಂಡಿ ಮೂರು ಕಿ.ಮಿ ದೂರ ಇದೆ. ಅಲ್ಲಿಗೆ ನಾವು ಬೈಕಿನಲ್ಲಿ ಹೋದೆವು. ನಾನು ಮತ್ತು ಚಾಸಾ-9 ಒಂದು ಬೈಕಿನಲ್ಲಿ ಹೋದೆವು. ನಾವು ಕಜ್ಜಿಬಂಡಿಗೆ ಹೋದಾಗ ಮದ್ಯಾಹ್ಣ 02.00 ಗಂಟೆಯಾಗಿತ್ತು. ಪೋಲಿಸರು ಮತ್ತು ನಾವು ಒಟ್ಟಿಗೆ ಕಜ್ಜಿಬಂಡಿಗೆ ಹೋಗಿದ್ದೆವು.

ನಾನು, ರಂಗನಾಥ ಮತ್ತು ಪೋಲಿಸರು ಬಿಟ್ಟು ಬೇರೆಯವರು ಇರಲಿಲ್ಲ ಎನ್ನುವುದು ನಿಜ. ಸದರಿ ಸ್ಥಳದ ಪೂರ್ವಕ್ಕೆ ಹಳ್ಳ, ಉತ್ತರಕ್ಕೆ ಹಳ್ಳ, ದಕ್ಷಿಣಕ್ಕೆ ಗಲಗನ ರೋಡ್, ಪಶ್ಚಿಮಕ್ಕೆ ಆಕಳಕುಂಪಿ ರೋಡ್ ಇರುತ್ತದೆ. ಆ ಜಾಗ ಸರಕಾರಿ ಜಾಗ ಇರುತ್ತದೆ. ಗುನ್ಹೆ ಸ್ಥಳದಲ್ಲಿ ನಾವು ಅರ್ಧ ಗಂಟೆ ಇದ್ದೆವು, 02.00 ಗಂಟೆಯಿಂದ 02.30 ವರೆಗೆ ಇದ್ದೆವು.

09. ನಿಪಿ.3(ಎ) ಸಹಿ ನನ್ನ ಸಹಿ ಇರುತ್ತದೆ. ನಿಪಿ.3 ರ ಮಹಜರನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ನಿಪಿ.3 ರ ಮಹಜರನ್ನು ಯಾರು ಹೇಳಿ ಬರೆಯಿಸಿದರು ಎಂದು ನನಗೆ ಗೊತ್ತಿಲ್ಲ. ನಿಪಿ.3 ರ ಮಹಜರದಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ.

10. ಈ ದಿನ ಚಾಸಾ.9 – ರಂಗನಾಥ ಸಾಕ್ಷಿ ಹೇಳಲು ಕರೆದುಕೊಂಡು ಬಂದಿದ್ದಾನೆ ಎನ್ನುವುದು ನಿಜ. ಈ ರೀತಿ ಸಾಕ್ಷಿ ಹೇಳಬೇಕು ಎಂದು ಚಾಸಾ-9 ನನಗೆ ಹೇಳಿದ್ದಾನೆ ಎನ್ನುವುದು ಸರಿಯಲ್ಲ. ಬಸವರಾಜ ತಂದೆ ದುರುಗಪ್ಪ, ಹನುಮಂತ್ರಾಯ, ಬಸವರಾಜ ತಂದೆ ಹನುಮಯ್ಯ ಇವರನ್ನು ಸಹ ರಂಗನಾಥ ಕರೆದುಕೊಂಡು ಬಂದಿದ್ದಾನೆ. ಚಾಸಾ.9 - ರಂಗನಾಥ ತಂದೆ ಭೀಮರಾಯ ದಳಪತಿ ಇವರು ಗ್ರಾಮ ಪಂಚಾಯತಿ ಅಧ್ಯಕ್ಷರಾಗಿದ್ದರು ಎನ್ನುವುದು ನಿಜ ಮತ್ತು ಈತನು ಕಾಂಗ್ರೆಸ್ ಪಾರ್ಟಿಯವರು ಎನ್ನುವುದು ನಿಜ ಮತ್ತು ಆತನು ರಾಜಕೀಯವಾಗಿ ಸಬಲನಾಗಿದ್ದಾನೆ ಎನ್ನುವುದು ನಿಜ. ಚಾಸಾ-9 ಫೋನ್ ಮೂಲಕ ಪೋಲಿಸರಿಗೆ ಹೇಳಿದರೆ ಪೋಲಿಸರು ಕೇಳುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ.

11. ಪೋಲಿಸರು ನನ್ನ ಸಮಕ್ಷಮ ಮಹಜರ ಮಾಡಿಲ್ಲ ಮತ್ತು ಚಾಕುವನ್ನು ಆರೋಪಿ ಹಾಜರು ಪಡಿಸಿಲ್ಲ ಎನ್ನುವುದು ಸುಳ್ಳು. ಪೋಲಿಸರು ಯಾವುದೇ ಮಹಜರನ್ನು ಸ್ಥಳದಲ್ಲಿ ಮಾಡಿಲ್ಲ ಎನ್ನುವುದು ಸುಳ್ಳು. ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

**(ಹತ್ತಿಕಾಳ ಪ್ರಭು ಸಿದ್ದಪ್ಪ)**
ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು.